ಬಾಡುತಿದೆ. ಪ್ರತಿವರ್ಷ ತವರಿಗೆ ಹೋಗಿ ಸಂಭ್ರಮಿಸುವ ಗೃಹಿಣಿಗೆ ನೀ ಬರಬೇಡ ಎಂದು ತವರಿನಲ್ಲಿ ಹೇಳಿದರೆ ಹೇಗಾಗಬೇಡ... ಭೂಮಿಯ ಜನರು ಯಾಕೆ ಹೀಗಾಗಿದ್ದಾರೆ ಎಂದು ಅರಿವಾಗದೇ ತಲೆ ಮೇಲೆ ಕೈಹೊತ್ತು ಕುಳಿತಿದ್ದಾಳೆ. ಅತ್ತ ಚಿಟ್ಟೆಗಳ ಕೀರಲು ಹಾಡು ಮುಂದುವರೆದಿದೆ...

ಹೌದು. ಈ ನದಿಗಳ ಪಾಡು ನೋಡಿದರೆ ಮನಸ್ಸು ಕಲಕುವಂತಾಗಿದೆ. ಓಡುವ ದಾರಿಯಲ್ಲಿ ಸಾವಿರಾರು ಅಡ್ಡಗೋಡೆಗಳು. ನಡೆಯಬೇಕಾದ ದಾರಿಯಲ್ಲಿ ಓಡುವಂತೆ ಅಟ್ಟಾಡಿಸಿ, ಒತ್ತಾಯಿಸಿ ಕಾಲುವೆ ಮಾಡಿಕೊಟ್ಟವರು ಹಲವರು.

ಇನಿಯನ ನೋಡಲು ಓಡೋಡಿ ಬರುವ ಪ್ರಿಯತಮೆ, ದೂರದಲ್ಲಿ ಅವನ ಚಹರೆ ಕಂಡ ಕೂಡಲೇ ಹೆಜ್ಜೆಗಳನ್ನು ನಿಧಾನಗೊಳಿಸುವಂತೆ, ಕನಸು ಲಜ್ಜೆಯ ಭಾರದಲ್ಲಿ ಹೆಜ್ಜೆ ಮೇಲೆ ಹೆಜ್ಜೆ ಇಡುವಂತೆ ನದಿಯೊಂದು ಸಮುದ್ರದ ಬಳಿ ಬರುತ್ತಿದ್ದಂತೆಯೇ ನಿಧಾನವಾಗಿ ಹರಿಯುತ್ತಿದ್ದರೆ, ಅಳಿವೆ ಬಾಗಿಲಲ್ಲೆ ತಡೆಯಲು ನಿಂತಿವೆ ದೊಣ್ಣೆನಾಯಕನಂತಹ ಆಕಾಶಚುಂಬಿ ಕಟ್ಟಡಗಳು.

ಅಷ್ಟೇಕೆ... ಮನೆಯೊಳಗೆ ಗೊಣಗುತ್ತಾರೆ, ಈ ಶನಿ ಮಳೆಯ ದೆಸೆಯಿಂದ ಆಫೀಸು ಹೋಗಲಾಗದೆಂದು. ಅಂಗಳಕ್ಕೆ ಹನಿಗಳು ಬೀಳುವುದೇ ಪಾಪವೇನೋ ಎಂಬಂತೆ ಹಾಸಿದ್ದಾರೆ ಕಾಂಕ್ರೀಟು. ಬುರ್ರನೆ ಜಾರಿ ಹೋಗುವ ಹನಿಗಳ ಇನ್ನಷ್ಟು ದೂರಕ್ಕೆ ಅಟ್ಟಿಬಿಡುವುದೇ ಜನರಿಗೆ ಸಾಹಸ. ಸಮುದ್ರದತ್ತ ಹೋಗೋಣವೆಂದರೆ ದಾರಿಯೆಲ್ಲಿದೆ. ಅಳಿವೆ ಬಾಗಿಲಿನಲ್ಲೇ 'ಸೀ ವ್ಯೂ' ಎಂಬ ಉಮೇದಿನಲ್ಲಿ ಎದ್ದು ನಿಂತ ಸಾಲುಸಾಲು ರೆಸಾರ್ಟುಗಳು. ಮನೆಗಳು. ವಾಪಸ್ಸು ಬಂದರೆ ಮನೆಗಳು ಅಂಗಡಿಗಳು ಮುಳುಗುತಿವೆ. ಯಾರೋ ಟೀವಿ ಪೆಟ್ಟಿಗೆಯಲ್ಲಿ ಬೊಬ್ಬಿಡುತ್ತಿದ್ದಾರೆ ಪ್ರವಾಹ ಬಂದಿದೆಯೆಂದು. 'ನಿಷ್ಕರುಣಿ ಮಳೆ' ಎಂಬ ಶೀರ್ಷಿಕೆ ಬರೆದಿದ್ದಾರೆ.

ಹರಿಯಲು ಒಂದಿಷ್ಟು ಜಾಗವನ್ನೇ ಕೊಡದೆ ಇಡೀ ನಗರವೇ ಕಿರುಚುತ್ತಿದೆ... ಹೋಗು ಮಳೆಯೇ ಹೋಗು ಎಂದು. ನಗರದ ಯುವಕರೆಲ್ಲ ಎಂಜಿನಿಯರ್ ಆಗಲು ಓದುತ್ತಿದ್ದಾರೆ. ಸುರಿವ ಮಳೆಗೆ ಕರೆಂಟು ಹೋಯಿತೆಂದು, ನನ್ನ ಓದು ಹಾಳಾಯಿತೆಂದು ಮಳೆಯ ಶಪಿಸುತ್ತಿದ್ದಾರೆ.

ಹಳ್ಳಿಗಳನ್ನೆಲ್ಲ ಸುಂದರ ನಗರವನ್ನಾಗಿಸುವ ಗೀಳಿಗೆ ಬಿದ್ದಿದ್ದಾರೆ. ರಸ್ತೆಯೆಲ್ಲಿರಬೇಕು, ಸಮುದಾಯ ಭವನ ಎಲ್ಲಿರಬೇಕು, ಸರ್ಕಾರದ ಕಚೇರಿ ಎಲ್ಲಿರಬೇಕು ಎಂಬ ಯೋಜನೆಗಳನ್ನು ರೂಪಿಸಲು ಜನರು ದಿನಗಟ್ಟಲೆ ತಂಪುಕೋಣೆಯಲ್ಲಿ ಕುಳಿತು ಚರ್ಚಿಸುತ್ತಾರೆ. ಬಹುದೂರದ ಊರಿನಿಂದ ತಮ್ಮೂರಿಗೆ ನೀರನ್ನು ಸುಲಭವಾಗಿ ತರುವುದು ಹೇಗೆಂದು ಚಿಂತನೆ ನಡೆಯುತ್ತಿದೆ.

ಇಲ್ಲಿ ಬಿದ್ದ ಹನಿ ನಾನು... ಎಲ್ಲಿ ಹೋಗಲಿ ಹೇಳಿ... ಎಂದು ಕೇಳುತಿದೆ ಪುಟ್ಟಹನಿಯೊಂದು. ಮನೆಯಿಂದ ಹೊರದಬ್ಬಿದ ಪುಟಾಣಿ ಕಂದನಂತೆ ತೋರುತಿದೆ.

ಊರಿನಲ್ಲಿ ಅಸ್ಪೃಶ್ಯತೆ ಆಚರಿಸಬಾರದೆಂದು ಠರಾವು ಮಾಡಿದ್ದಾರೆ. ಎಲ್ಲ ಸಮುದಾಯಕ್ಕೂ ಮಾನ್ಯತೆ ಸಿಗುವಂತೆ ಸಾಲುಸಾಲು ನಿಯಮಗಳನ್ನು ರೂಪಿಸಿದ್ದಾರೆ. ಮಹಿಳೆಯರಿಗೆ ಅವಕಾಶ ಕಲ್ಪಿಸಬೇಕು ಎಂದು ಚರ್ಚೆಗಳನ್ನು ಮಾಡಿದ್ದಾರೆ. ಯಾರು ಆಳಬೇಕು, ಯಾರು ವಿರೋಧಿಸಬೇಕು ಎಂದು ಗಲಾಟೆ ನಡೆಯುತ್ತಿದೆ. ಅವರಿಗೆಲ್ಲ ಬೇಕು ಬೇಕಾದ ಠರಾವು ಮಾಡುವಾಗ ಮಳೆಹನಿಯೊಂದು ಬಾಗಿಲ ಬಳಿ ನಿಂತು ಬೇಡಿಕೊಳ್ಳುತಿದೆ... ಹರಿದು ಹೋಗಲು ನನಗೊಂದಿಷ್ಟು ಜಾಗ ನೀಡಿ... ಎಂದು.

ಕೇಳುವವರಾರು.